ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಮೌಖಿಕ ಉತ್ತರಗಳು

ದಕ್ಷಿಣ ಕನ್ನಡ ಜಿಲ್ಲೆಯ ಹೊಸಾಡುನಲ್ಲಿರುವ ಫೆನ್ನಿ ಕಾರ್ಖಾನೆ

೯೦. ಶ್ರೀ ಜಿ. ಎಸ್. ಆಚಾರ್ (ಬೈಂದೂರ್).—ಮಾನ್ಯ ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ದಕ್ಷಿಣ ಕನ್ನಡ ಜಿಲ್ಲೆಯ ಹೊಸಾಡು ಎಂಬಲ್ಲಿ ಗೋಡಂಬಿ ಅಭಿವೃದ್ಧಿ ನಿಗಮದವರಿಂದ ಸ್ಥಾಪಿತವಾದ ಫೆನ್ನಿ ಫ್ಯಾಕ್ಟರಿಗೆ ತಗಲಿದ ಒಟ್ಟು ವೆಚ್ಚವೆಷ್ಟು ?

೨. ೧೯೫೯-೬೦ನೇ ವರ್ಷದಲ್ಲಿ ಎಷ್ಟು ಮೌಲ್ಯದ ಫೆನ್ನಿ ಉತ್ಪಾದನೆ ಆಗಿದೆ ?

೩) ಈ ಘಟಕದ ಯೋಜಿತ ಉತ್ಪಾದನೆ ಪೂರ್ಣ ಪ್ರಮಾಣದ ಉತ್ಪಾದನೆ ಎಂದಿನಿಂದ ಪ್ರಾರಂಭವಾಗುವುದು ?

ಶ್ರೀ ಕೆ. ಹೆಚ್. ರಂಗನಾಥ್ (ಅರಣ್ಯಮಂತ್ರಿಗಳು).—

೧) ಇದುವರೆವಿಗೆ ವೆಚ್ಚ ಮಾಡಿರುವ ಮೊತ್ತ ರೂ. ೩೪,೪೭,೪೦೫.೭೭

೨) ೧೯೫೯-೬೦ನೇ ಸಾಲಿನಲ್ಲಿ ಸುಮಾರು ೬,೦೦೦ ಲೀಟರ್ ಫೆನ್ನಿಯನ್ನು ಉತ್ಪಾದಿಸಲಾಗಿದ್ದು ಇದರ ಅಂದಾಜು ಮೌಲ್ಯ ರೂ. ೪.೮ ಲಕ್ಷಗಳಾಗಿರುತ್ತದೆ.

೩) ಯೋಜಿತ ಉತ್ಪಾದನೆ ಈಗಾಗಲೇ ಪ್ರಾರಂಭಿಸಲಾಗಿದ್ದು, ಬ್ಲೆಂಡಿಂಗ್, ಬಾಟ್ಲಿಂಗ್ ಮತ್ತು ಮಾರಾಟ ಮಾಡುವಿಕೆ ಮುಂತಾದ ಪೂರ್ಣ ಪ್ರಮಾಣದ ಉದ್ಪಾದನೆಯನ್ನು ಏಪ್ರಿಲ್ ೧೯೬೦ ರಿಂದ ಪ್ರಾರಂಭವಾಗಬಹುದು.

ಶ್ರೀ ಜಿ. ಎಸ್. ಆಚಾರ್.—ಮಂತ್ರಿಗಳು ಕೊಟ್ಟ ಉತ್ತರದಲ್ಲಿ ಸದರಿ ನಿಗಮವು ಗೋಡಂಬಿ ಅಭಿವೃದ್ಧಿ ನಿಗಮದಿಂದ ಸ್ಥಾಪನೆಯಾದದ್ದಾಗಿದ್ದು ಅದು ಕಾರ್ಯಾರಂಭ ಮಾಡುವುದರಲ್ಲಿ ಸ್ವಲ್ಪ ವಿಳಂಬವಾಗಿದೆ ಎಂದಿದ್ದಾರೆ. ಹಿಂದಿನ ಸರ್ಕಾರದ ಕಾಲದಲ್ಲಿ ಖಾಸಗಿ ವಲಯಕ್ಕೆ ಕೂಡ ಲೈಸೆನ್ಸ್ ಕೊಡುತ್ತಿದ್ದರು, ಇದರಿಂದ ಈ ಘಟಕಕ್ಕೆ ತೊಂದರೆಯಾಗುತ್ತಿದೆ. ಇದನ್ನು ಸರ್ಕಾರ ಗಮನಿಸುತ್ತದೆಯೇ ? ಇನ್ನು ಮುಂದೂ ಅನಿಬಂಧಿತವಾಗಿ ಲೈಸೆನ್ಸನ್ನು ಕೊಡುವ ಯೋಚನೆ ಇದೆಯೇ ಎಂದು ಕೇಳಲು ಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ. ಆ ಪ್ರಶ್ನೆ ಬೇರೆ ಇಲಾಖೆಗೆ ಸಂಬಂಧಪಟ್ಟಿರುತ್ತದೆ. ಖಾಸಗಿ ವಲಯಕ್ಕೆ ಕೊಡತಕ್ಕಂಥದ್ದರ ಯೋಜನೆ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಅದರ ಬಗ್ಗೆ ಬೇರೆ ಪ್ರಶ್ನೆಯನ್ನು ಮಾನ್ಯ ಸದಸ್ಯರು ಹಾಕಿದರೆ ಅದಕ್ಕೆ ಉತ್ತರವನ್ನು ಕೊಡುತ್ತೇನೆ.

ಶ್ರೀ ಕ.ಗೋಡು ಶಿವಮ್ಮಪ್ಪ.—ಯೋಜಿತ ಉತ್ಪಾದನೆ ಎಂದರೆ ಎಷ್ಟು ಲೀಟರ್ ಉತ್ಪಾದನೆ ಯಾಗುತ್ತದೆ ? ಅದರ ಅಂದಾಜು ಮೌಲ್ಯ ಎಷ್ಟು ?

ಶ್ರೀ ಕೆ. ಹೆಚ್. ರಂಗನಾಥ್.—ಆ ವಿವರ ನನ್ನಲ್ಲಿ ಇಲ್ಲ.

ಕನಕಪುರದಲ್ಲಿರುವ ಮೊದಲನೇ ದರ್ಜೆ ಪದವಿ ಮಹಾವಿದ್ಯಾಲಯಂ

೧೦೬. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಕೃಷಿ, ತೋಟಗಾರಿಕೆ, ಶಿಕ್ಷಣ, ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕನಕಪುರದಲ್ಲಿ ಮೊದಲನೆ ದರ್ಜೆಯ ಪದವಿ ಕಾಲೇಜು ಎಂದಿನಿಂದ ಪ್ರಾರಂಭವಾಗಿದೆ ?

ಆ) ಈ ಕಾಲೇಜನ್ನು ರದ್ದು ಮಾಡಬೇಕೆಂದು ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಸರ್ಕಾರಕ್ಕೆ ಮನವಿ ಬಂದಿದೆಯೇ ?

ಇ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಕೆ. ಹೆಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು).— ಅ) ೧೯೮೭–೮೮ನೇ ಸಾಲಿನಿಂದ

ಆ) ಬಂದಿದೆ.

ಇ) ಇನ್ನೂ ತೀರ್ಮಾನವಾಗಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಸನ್ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಬೆಂಗಳೂರು ಜಿಲ್ಲೆಗೆ ಬಹಳ ಹತ್ತಿರದಲ್ಲಿ ಕನಕಪುರ ತಾಲ್ಲೂಕು ಇದ್ದರೂ ಸಹ ಸುತ್ತ ಮುಮ್ಮಾರು ನಾಲ್ಕು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರತಕ್ಕಂಥ ನಮ್ಮ ತಾಲ್ಲೂಕಿನಲ್ಲಿ ಇದುವರೆಗೂ ಕಾಲೇಜು ಇರತಕ್ಕಂಥದ್ದು ಒಂದೇ. ದಿವಂಗತ ಪೂಜ್ಯ ಎಸ್, ಕರಿಯಪ್ಪನವರು ಸ್ಥಾಪನೆ ಮಾಡಿರತಕ್ಕಂಥ ಈ ಕಾಲೇಜನ್ನು ಬಿಟ್ಟರೆ ಬೇರೆ ಯಾವ ಕಾಲೇಜು ಅಲ್ಲಿ ಇಲ್ಲ. ಎಲ್ಲರೂ ಸಹಾ ಬೆಂಗಳೂರಿಗೆ ಬರಬೇಕಾಗುತ್ತದೆ. ೧೯೮೭–೮೮ನೇ ಇಸವಿಯಲ್ಲಿ ಇದು ಖಾಸಗಿ ಕಾಲೇಜು ಆದುದರಿಂದ ಕೆಲವರಿಗೆ ಅಲ್ಲಿ ಪ್ರವೇಶ ದೊರಕುವುದು ಬಹಳ ಕಷ್ಟವಾಗುತ್ತದೆ ಎನ್ನುವ ದೃಷ್ಟಿಯಿಂದ ಸರ್ಕಾರದವರು ಅಲ್ಲಿ ಫಸ್ಟ್ ಗ್ರೇಡ್ ಕಾಲೇಜನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಇದನ್ನು ಯಾವ ಕಾರಣಕ್ಕೋಸ್ಕರ ಬೆಂಗಳೂರು ವಿಶ್ವವಿದ್ಯಾನಿಲಯದವರು ಮುಂದುವರಿಸಬಾರದು, ಇದಕ್ಕೆ ಅಪಿಲಿಯೇಷನನ್ನು ಕೊಡಬಾರದು ಎನ್ನುವ ರೆಕಮೆಂಡೇಷನ್‌ನ್ನು ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು. ಇದರ ಜೊತೆಗೆ Government has not yet taken any decision in this regard. ಎಂದು ಹೇಳಿದ್ದಾರೆ. ಯಾವಾಗ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ ? ಏಕೆಂದರೆ ಜೂನ್‌ನಲ್ಲಿ ಕಾಲೇಜುಗಳು ಪ್ರಾರಂಭ ವಾಗುತ್ತದೆ. ಆದರಲ್ಲಿ ಯಾವುದೇ ರೀತಿಯ ಸಂಶಯ ಇದ್ದರೆ ವಿದ್ಯಾರ್ಥಿಗಳು ಬೇರೆ ಕಡೆ ಪ್ರವೇಶವನ್ನು ತೆಗೆದುಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಆದನ್ನು ಕೂಡಾ ತಿಳಿಸಬೇಕು. ಮತ್ತು ಈ ರೀತಿ ಬೆಂಗಳೂರು ಯೂನಿವರ್ಸಿಟಿಯವರು ರೆಕಮೆಂಡ್‌ನ್ನು ಮಾಡಿರುವುದಾದರೆ ಎಷ್ಟು ಕಾಲೇಜು ಗಳಿಗೆ ಆ ರೀತಿ ರೆಕಮೆಂಡ್ ಮಾಡಿದ್ದಾರೆ. ಆ ರೀತಿ ಏತಕ್ಕೆ ಮಾಡಿದೆ ಎನ್ನುವುದನ್ನು ಕೂಡಾ ಮಾನ್ಯ ಸಚಿವರು ಈ ಸದನಕ್ಕೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಆ ಕಾಲೇಜಿನ ಪೂರಾ ವಿವರವನ್ನು ಕೇಳಿದರೆ ಅವರಿಗೆ ಬೇಸರವಾಗುತ್ತದೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಆ ಕಾಲೇಜಿಗೆ ಯಾವ ಅನುಕೂಲಗಳು ಇಲ್ಲ. ಇನ್‌ಫ್ರಾಸ್ಟ್ರಕ್ಚರ್ ಆಗಲಿ, ವಿದ್ಯಾರ್ಥಿಗಳ ಸಂಖ್ಯೆ ಯಾಗಲೀ ಯಾವುದೂ ಅಲ್ಲಿ ಇಲ್ಲ. ವಿಶ್ವವಿದ್ಯಾನಿಲಯದವರು ಇದಕ್ಕೆ ಅಪ್ಪಣೆಯನ್ನು ನಿರಾಕರಣೆ ಮಾಡಿದ್ದಾರೆ, ಸಿಂಡಿಕೇಟ್‌ನವರು ಕೂಡಾ ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಆದರೆ ಸರ್ಕಾರ ಇದನ್ನು ಕ್ಯಾನ್ಸಲ್ ಮಾಡತಕ್ಕಂಥ ತೀರ್ಮಾನವನ್ನು ಇನ್ನೂ ತೆಗೆದುಕೊಂಡಿಲ್ಲ, ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ ತುಂಬಾ ಕಡಿಮೆ ಇದೆ. ಕೇವಲ ೩೦–೩೫ರಷ್ಟು ಮಾತ್ರ ವಿದ್ಯಾರ್ಥಿಗಳ ಸಂಖ್ಯೆ ಇದೆ. ೩೦–೩೫ ರಷ್ಟು ಸಂಖ್ಯೆ ಇರತಕ್ಕಂತ ಕಾಲೇಜಿಗೆ ಅನುಮತಿ ಕೊಡತಕ್ಕಂಥಾದ್ದರೆ ಅಂಥ ಕಾಲೇಜುಗಳನ್ನು ನಡೆಸಿ ಕೊಂಡು ಹೋಗತಕ್ಕಂಥಾದ್ದರೆ ಅದು ಸರ್ಕಾರಕ್ಕೆ ದೊಡ್ಡ ಭಾರವಾಗುತ್ತದೆ. ಇದನ್ನು ಮಾನ್ಯ ಸದಸ್ಯರು ಗಮನದಲ್ಲಿ ಇಟ್ಟುಕೊಳ್ಳುತ್ತಾರೆಂದು ನಾನಾದರೂ ಕೂಡ ಭಾವಿಸಿದ್ದೇನೆ. ಕಾಲೇಜು ಪ್ರಾರಂಭವಾಗಿ ಮೂರು ವರ್ಷವಾದರೂ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗದೇ ಇರುವುದರಿಂದ ಸರ್ಕಾರ ಅನಿವಾರ್ಯವಾಗಿ ಇದರ ಬಗ್ಗೆ ಪುನರ್ ವಿಮರ್ಶೆ ಮಾಡಬೇಕಾಗುತ್ತದೆ. ಆದರೆ ನಾನು ತತ್‌ಕ್ಷಣ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಇಷ್ಟಪಡುತ್ತಿಲ್ಲ. ಇನ್ನೇನಾದರೂ ಬೇರೆ ರೂಪದಲ್ಲಿ ಯಾವುದಾದರೂ ಕಾಲೇಜು ಆ ಊರಿನಲ್ಲಿ ಇರುವುದಕ್ಕೆ ವ್ಯವಸ್ಥೆ ಆಗುತ್ತದೆಯೇ ಹೇಗೆ ಎನ್ನುವುದರ ಬಗ್ಗೆ ಯೋಚನೆಯನ್ನು ಕೂಡ ಮಾಡುತ್ತಿದ್ದೇನೆ, ಅದು ಅನಿವಾರ್ಯವಾಗಿ ಬಂದರೆ ಇದನ್ನು ಮುಚ್ಚುವುದಕ್ಕೆ ತೀರ್ಮಾನವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರು ಕೂಡಾ ಆ ತೀರ್ಮಾನಕ್ಕೆ ಸಹಕಾರವನ್ನು ಕೊಡಬೇಕಾಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಚಿವರು ಸರ್ಕಾರದಿಂದ ನಡೆಯುತ್ತಿರತಕ್ಕ ಕಾಲೇಜನ್ನು ಮುಚ್ಚುತ್ತೇವೆ ಎನ್ನುವುದನ್ನು ಇನ್ ಡೈರೆಕ್ಟಾಗಿ ಹೇಳಿದ್ದಾರೆ. Government has not yet taken any decision. ಎಂದು ಹೇಳಿದರೂ ಸಹ ತಮ್ಮ ಮಾತಿನ ಧಾಟಿ, ತಮ್ಮ ಮಾತಿನ ಹಿಂದುಗಡೆ ಇರತಕ್ಕ ಅರ್ಥ ಅದನ್ನು ಮುಚ್ಚುತ್ತೀರಿ ಎಂದು ನಾವು ಅಂದುಕೊಂಡಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.—ಬೇರೆ ರೂಪದಲ್ಲಿ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಬೇರೆ ರೂಪದಲ್ಲಿ ಎಂದರೆ ಏನು ಎಂದು ದಯವಿಟ್ಟು ಹೇಳಿ. ಫರ್ಸ್ಟ್ ಗ್ರೇಡ್ ಕಾಲೇಜನ್ನು ಸರ್ಕಾರ ಪ್ರಾರಂಭ ಮಾಡಿದೆ. ಇನ್‌ಫ್ರಾಸ್ಟ್ರಕ್ಚರ್ ಇಲ್ಲ ಎಂದು ಯಾವ ಕಾಲೇಜಿಗೆ ಸಹಿತ ಸರ್ಕಾರದವರು ಯುಜಿಸಿಯವರು ಹೇಳಿರುವ ಪ್ರಕಾರ ಅಥವಾ ಯೂನಿವರ್ಸಿಟಿಯವರು ಹೇಳಿರುವ ಪ್ರಕಾರ ಏನೂ ಕೊಟ್ಟಿಲ್ಲ. ಕರ್ನಾಟಕದಲ್ಲಿರತಕ್ಕ ಬಹುತೇಕ ಸರ್ಕಾರಿ ಕಾಲೇಜುಗಳಲ್ಲಿ ಅವರು ಕೇಳಿರತಕ್ಕಂಥ ಇನ್‌ಫ್ರಾಸ್ಟ್ರಕ್ಚರ್ ಅನ್ನು ಕೊಡುವುದಕ್ಕೆ ಆಗಿಲ್ಲ. ೨೩ ವರ್ಷಗಳಲ್ಲಿ ಇವುಗಳನ್ನು ಮಾಡುವುದಕ್ಕೆ ಆಗಿಲ್ಲವಿದಿಲ್ಲ. ಸರ್ಕಾರದ ಹತ್ತಿರ ಹಣ ಇಲ್ಲ. ಮೂರು ವರ್ಷದ ಹಿಂದೆ ಅಕಾಡೆಮಿಕ್ ಇಯರ್ ಪ್ರಾರಂಭವಾಗಿದ್ದನ್ನು ಪ್ರಾರಂಭ ಮಾಡಲಿಕ್ಕೆ ಯೂನಿವರ್ಸಿಟಿಯವರು ಒಪ್ಪಿಕೊಂಡಿದ್ದರು. ಹೀಗಾಗಿ ಪರ್ಮಿಷನ್ ಸ್ವಲ್ಪ ಕಡಿಮೆ ಆಗಿತ್ತು. ಈಗ ಏನು ಆಗಿದೆ ಅಂದರೆ ಹುಡುಗರು ಜಾಸ್ತಿ ಆಗಿದ್ದಾರೆ. ಅಫಿಲಿಯೇಷನ್ ಅನ್ನು ಬೆಂಗಳೂರು ಯೂನಿವರ್ಸಿಟಿಯವರು ಪ್ರಾಡಬೇಕಾಗಿದೆ ಎಂದು ಹೇಳಿದರೆ ಇದರ ಹಿಂದೆ ರಾಜಕೀಯ ಇದೆ. ಇದನ್ನು ನಿಲ್ಲಿಸುತ್ತೇವೆ, ಎಂದು ತಾವು ಸ್ಪಷ್ಟವಾಗಿ ಹೇಳಿ ನಾವು ಸಹಕಾರ ಕೊಡುವುದು ಅಥವಾ ಬಿಡುವುದು ನಮಗೆ ಸೇರಿದ್ದಾದು. ನಾವು ಪ್ರಶ್ನೆ ಹಾಕಿ ಬಹಿರಂಗ ಅಥವಾ ಮುಖ್ಯಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುವುದು ಬಿಟ್ಟರೆ ಬೇರೆ ರೀತಿಯ ಸಹಕಾರ ಇಲ್ಲ. ನೀವು ಸ್ಪಷ್ಟವಾಗಿ ಹೇಳಿ, ನಾವು ಪ್ರಾರಂಭ ಮಾಡಿರತಕ್ಕ ಕಾಲೇಜನ್ನು ಮುಚ್ಚುತ್ತೇವೆ ಎಂದು ನಮ್ಮ ವಿದ್ಯಾರ್ಥಿಗಳು ಬೇರೆ ಕಡೆಗೆ ಹೋಗುತ್ತಾರೆ. ಫರ್ಸ್ಟ್ ಗ್ರೇಡ್ ಕಾಲೇಜಿಗೆ ಏನು ಅಲ್ಟರ್ನೇಟೀವ್ ಮಾಡುತ್ತೀರಿ ಎಂದು ಹೇಳಿ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಕಷ್ಟವೂ ಆರ್ಥವಾಗುತ್ತದೆ. ಮಾನ್ಯ ಸದಸ್ಯರಿಗೂ ಆರ್ಥವಾಗುತ್ತದೆ. ಇದು ಅವರ ಕೂಸು ಇದು ಅವರ ಕೂಸು ಅದ್ದರಿಂದ ಸ್ವಲ್ಪ ಪ್ರೀತಿ, ಅಭಿಮಾನ ಜಾಸ್ತಿ. ಈ ಕಾಲೇಜನ್ನು ಅವರೇ ಪ್ರಾರಂಭ ಮಾಡಿದ್ದಾರೆ "ಪೆಣ್ಣುವರಿಗೆ ಪೆಗ್ಗಣ ಮದ್ದು" ಎನ್ನುವ ಹಾಗೆ ಇವರಿಗೆ ಪ್ರೀತಿ ಜಾಸ್ತಿ. ೩೫ ಹುಡುಗರಿಗೆ ಒಂದು ಕಾಲೇಜನ್ನು ನಡೆಸುವಷ್ಟು ಕರ್ನಾಟಕ ಶ್ರೀಮಂತ ಆಗಿದೆಯೇ ? ಈ ದೃಷ್ಟಿಯಿಂದ ಇದನ್ನು ವಿಚಾರ ಮಾಡುತ್ತಿದ್ದೇವೆ. ರಾಜಕೀಯ ಪ್ರಶ್ನೆಯಿಂದ ವಿಚಾರ ಮಾಡುತ್ತಾ ಇಲ್ಲ. ನಾನು ಬೇರೆ ರೂಪದಲ್ಲಿ ವಿಚಾರ ಮಾಡುತ್ತೇನೆ ಎಂದು ಹೇಳಿದೆ. ನನ್ನ ಮನಸ್ಸಿನಲ್ಲಿರತಕ್ಕದ್ದು ಏನು ಅಂದರೆ ವ್ಯವಸ್ಥಿತವಾಗಿ ಫರ್ಸ್ಟ್ ಗ್ರೇಡ್ ಹೆಣ್ಣು ಮಕ್ಕಳ ಕಾಲೇಜನ್ನು ಮಾಡುವುದಕ್ಕೆ ಸಾಧ್ಯ ಇದೆಯೇ ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆ. ಸಾಧ್ಯ ಇದೆಯೆಂದು ಕಂಡು ಬಂದರೆ ಕಾಲೇಜನ್ನು ಉಳಿಸಿ ಹೆಣ್ಣು ಮಕ್ಕಳಿಗೋಸ್ಕರ ಫರ್ಸ್ಟ್ ಗ್ರೇಡ್ ಕಾಲೇಜ್ ಮಾಡುತ್ತೇವೆ. ಇಲ್ಲದೇ ಹೋದರೆ ಅನಿವಾರ್ಯವಾಗಿ ಕಾಲೇಜನ್ನು ಮುಚ್ಚಬೇಕಾಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಸಚಿವರನ್ನು ಕೇಳಿದ್ದು ಬೆಂಗಳೂರು ಯೂನಿವರ್ಸಿಟಿಯವರು ಈ ರೀತಿ ರೆಕಮೆಂಡೇಷನ್ ಮಾಡಬೇಕಾದರೆ ಏನು ಕಾರಣಗಳನ್ನು ಕೊಟ್ಟಿದ್ದಾರೆ. ಎಷ್ಟು ಕಾಲೇಜಿನ ಅಫಿಲಿಯೇಷನ್ ಕಿತ್ತು ಹಾಕಬೇಕು ಎನ್ನುವುದನ್ನು ಕಳಿಸಿದ್ದಾರೆ. ಈ ರೀತಿಯ ರೆಕಮೆಂಡೇಷನ್ ಮಾಡಿದ್ದರೆ ಸ್ಪೆಸಿಫಿಕ್ ಆಗಿ ಮಾನ್ಯ ಸಚಿವರು ಹೇಳಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರ ಆಪಾದನೆ ಯೂನಿವರ್ಸಿಟಿಯವರು ಉದ್ದೇಶ ಪೂರ್ವಕವಾಗಿ ಈ ಕಾಲೇಜಿಗೆ ಅನುಮತಿಯನ್ನು ನಿರಾಕರಣೆ ಮಾಡಿದೆ ಎನ್ನುವುದು. ಈ ಆರ್ಥ ಬರುವ ಅವರ ಪ್ರಶ್ನೆ ಸಾಧುವಾದುದು ಅಲ್ಲ. ಏಕೆಂದರೆ ಆ ಕಟ್ಟಡ ಇಲ್ಲ, ಎಲ್ಲದಕ್ಕೂ ಹೆಚ್ಚಾಗಿ ಅಲ್ಲಿ ವಿದ್ಯಾರ್ಥಿಗಳೇ ಇಲ್ಲ. ಓದುವವರೇ ಇಲ್ಲದೇ ಇದ್ದ ಮೇಲೆ ಯಾವ ರೀತಿ ಸಹಕಾರ ಕೊಡಬೇಕು ಎಂದು ನನಗೆ ಅರ್ಥ ಆಗುತ್ತಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—೩೫ ಜನ ಹುಡುಗರು ಇದ್ದಾರೆ ಎಂದು ಹೇಳಿದ್ದೀರಿ. ವಿದ್ಯಾರ್ಥಿಗಳೇ ಇಲ್ಲ ಎಂದು ಹೇಳಿದರೆ ಹೇಗೆ ?

ಶ್ರೀ ಕೆ. ಹೆಚ್. ರಂಗನಾಥ್.—ಮೊದಲನೆಯ ವರ್ಷ ಮೂರು ಜನ ಇದ್ದರು. ಎರಡು ವರ್ಷ ಮೂರು ಜನಕ್ಕೋಸ್ಕರವಾ ಕಾಲೇಜನ್ನು ಸರ್ಕಾರ ನಡೆಸಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಯಾರೋ ತಪ್ಪು ಅಂಕ ಅಂಶಗಳನ್ನು ಕೊಟ್ಟಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ತಪ್ಪು ಇದ್ದರೆ ಸರಿ ಮಾಡೋಣ. ಸರ್ಕಾರದ ಅಂಕಿ ಅಂಶಗಳನ್ನು ಹೇಳಿದೆ. ಮತ್ತು ಇದನ್ನು ಪುನರ್ ವಿಮರ್ಶೆ ಮಾಡುತ್ತೇನೆ ಹೆಣ್ಣು ಮಕ್ಕಳ ಸಂಖ್ಯೆ ಅಲ್ಲಿ ಜಾಸ್ತಿ ಇದೆ. ಹೆಣ್ಣು ಮಕ್ಕಳಿಗೋಸ್ಕರವಾಗಿ ಅಲ್ಲಿ ಪ್ರತ್ಯೇಕವಾದ ಕಾಲೇಜು ಇಲ್ಲ. ಆ ಊರಿಗೆ ಕಾಲೇಜ್ ಸ್ಯಾಂಕ್ಷನ್ ಆಗಿದೆ. ಅದನ್ನು ತೆಗೆದು ಹಾಕುವುದು ಏಕೆ ಎಂದು ಅದನ್ನು ಪುನರ್ ಪರಿಶೀಲನೆ ಮಾಡುತ್ತಿದ್ದೇವೆ.